KARNATAKA NURSING & PARAMEDICAL SCIENCES EDUCATION (REGULATION) AUTHORITY
**Karnataka State Diploma In Nursing Examination Board**
First Floor, Library Block, BMC&RI Campus, K.R.Road, Bengaluru-560002, **Ph No**: 080-26700074, 26700075
**Email**: ksdneb@gmail.com **Website:** www.ksdneb.org

**KSDNEB/Est/ 14 /2021-22** **Date: 28.09.2021**

ವಿಷಯ: 2021–22ನೇ ಶೈಕ್ಷಣಿಕ ಸಾಲಿನ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್ ಪ್ರವೇಶಕ್ಕಾಗಿ ಆನ್‌ಲೈನ್ ಕೌನ್ಸಿಲಿಂಗ್ ಪ್ರಕ್ರಿಯೆ ನಡೆಸುತ್ತಿರುವ ಬಗ್ಗೆ.

******

2021–22ನೇ ಶೈಕ್ಷಣಿಕ ಸಾಲಿನಲ್ಲಿ ಡಿಪ್ಲೋಮಾ ಇನ್ ನರ್ಸಿಂಗ್ ಕೋರ್ಸ್‌ಗಳ ಪ್ರವೇಶಕ್ಕಾಗಿ ಹಿಂದಿನ ಸಾಲಿಗಿಂತ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸಲ್ಲಿಕೆ ಆಗಿರುವ ಹಿನ್ನೆಲೆಯಲ್ಲಿ ಹಾಗೂ ಪ್ರಸ್ತುತವಿರುವ ಕೋವಿಡ್–19 ರ ಕಾರಣದಿಂದ ಅಭ್ಯರ್ಥಿಗಳ ಹಾಗೂ ಪೋಷಕರ ಆರೋಗ್ಯದ ಹಿತದೃಷ್ಟಿಯನ್ನು ಗಮನದಲ್ಲಿಸಿಕೊಂಡು ಎಲ್ಲಾ ಅಭ್ಯರ್ಥಿಗಳಿಗೆ ಆನ್‌ಲೈನ್ ಮುಖಾಂತರ ಕೌನ್ಸಿಲಿಂಗ್ ಪ್ರಕ್ರಿಯೆಯನ್ನು ನಡೆಸಲು ಮಂಡಳಿಯು ತೀರ್ಮಾನಿಸಿರುತ್ತದೆ.

ಆದುದರಿಂದ ರಾಜ್ಯದಾದ್ಯಂತ ಸರ್ಕಾರಿ ಮೆಡಿಕಲ್ ಕಾಲೇಜುಗಳೂ ಸೇರಿದಂತೆ ಒಟ್ಟು 12 ಕೇಂದ್ರಗಳನ್ನು ಗುರುತಿಸಲಾಗಿದೆ (ಅನುಬಂಧ–1). ತಮ್ಮ ರ್‍ಯಾಂಕ್‌ಗೆ ಅನುಗುಣವಾಗಿ ಅಭ್ಯರ್ಥಿಗಳು ತಮಗೆ ಅನುಕೂಲವೆನಿಸುವ ಕೇಂದ್ರಕ್ಕೆ ಎಲ್ಲಾ ಮೂಲದಾಖಲಾತಿಗಳೊಂದಿಗೆ ಭೇಟಿ ನೀಡಿ, ದಾಖಲೆಗಳನ್ನು ಪರಿಶೀಲಿಸಿಕೊಂಡ ನಂತರ ನೀವು ಸೇರ ಬಯಸುವ ಶುಶ್ರೂಷಾ ಶಾಲೆಗಳ ವಿವರವನ್ನು ಆದ್ಯತೆಯ ಮೇಲೆ ಆನ್‌ಲೈನ್ ಮುಖಾಂತರ ನಮೂದಿಸುವಂತೆ ಮಂಡಳಿಗೆ ಅರ್ಜಿ ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ನೀಡಿರುವ ಮೊಬೈಲ್ ಸಂಖ್ಯೆಗೆ SMS ಮುಖಾಂತರ ಅವರುಗಳ ರ್‍ಯಾಂಕ್‌ಗೆ ಅನುಗುಣವಾಗಿ ಕೇಂದ್ರಗಳಿಗೆ ಭೇಟಿ ನೀಡುವ ದಿನಾಂಕದ ಬಗ್ಗೆ ಸದ್ಯದಲ್ಲಿಯೇ ತಿಳಿಸಲಾಗುವುದು. ಅಭ್ಯರ್ಥಿಗಳು ತಮ್ಮ ರ್‍ಯಾಂಕ್, ದಿನಾಂಕ, ಕೌನ್ಸಿಲಿಂಗ್ ಕೇಂದ್ರಗಳು ಮತ್ತು ಇತರ ಹೆಚ್ಚಿನ ಮಾಹಿತಿಗಾಗಿ www.ksdneb.org ಜಾಲ ತಾಣವನ್ನು ಸಂಪರ್ಕಿಸಬಹುದು.

ಕೌನ್ಸಿಲಿಂಗ್ ಸಮಯದಲ್ಲಿ ಪರಿಶೀಲನೆಗಾಗಿ ಕಡ್ಡಾಯವಾಗಿ ಸಲ್ಲಿಸಬೇಕಾಗಿರುವ ಮೂಲದಾಖಲಾತಿಗಳ ವಿವರ ಈ ಕೆಳಕಂಡಂತಿವೆ:

1. ಮೂಲ ಅಂಕಪಟ್ಟಿಗಳು (ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ),
2. ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವ 07 ವರ್ಷಗಳ ಪ್ರಮಾಣ ಪತ್ರ
3. ಜಾತಿ ಪ್ರಮಾಣ ಪತ್ರ
4. ಹೈದ್ರಾಬಾದ್–ಕರ್ನಾಟಕ ಮೀಸಲಾತಿ ಪಡೆಯುವವರಿಗೆ 371–J Annexure-A ಪ್ರಮಾಣ ಪತ್ರ
5. ಹೊರನಾಡ ಕನ್ನಡಿಗರು/ಗಡಿನಾಡ ಕನ್ನಡಿಗರು ದೃಡೀಕರಣ ಪತ್ರ
6. ಅರ್ಜಿಯ ಶುಲ್ಕದ ಚಲನ್

7. ಅಂಗವಿಕಲ ಅಭ್ಯರ್ಥಿಗಳು ದೇಹದ ಕೆಳಭಾಗದಲ್ಲಿ (ಕಾಲು) ಶೇ. 40 ರಿಂದ 50 ಒಳಗೆ ಅಂಗವಿಕಲತೆ ಹೊಂದಿರುವವರು ದೃಡೀಕರಣ ಪತ್ರ

## ಅನುಬಂಧ – 1

ಮಂಡಳಿಯು ಮುಲದಾಖಲಾತಿಗಳ ಪರಿಶೀಲನೆಗಾಗಿ ಗುರುತಿಸಿರುವ ಕೇಂದ್ರಗಳ ವಿವರ ಈ ಕೆಳಂಡಂತಿವೆ:

| Sl.No | Name of the Verification Center | District/s attached to the Center |
|---|---|---|
| 1 | Bangalore Medical College & Research Institute, Bengaluru | Bengaluru Urban and Rural, Kolara, Tumakuru, Chikkaballapura, Ramanagara |
| 2 | Chamarajanagar Institute of Medical Sciences, Chamarajanagara | Mysuru, Chamarajanagara, Kodagu, Mandya |
| 3 | BVVS Sajjalashree Nursing Institute, Bagalakote | Bagalakote, Bijapura |
| 4 | Shivamogga Institute of Medical Sciences, Shivamogga | Shivamogga, Davanagere |
| 5 | Vijayanagara Institute of Medical Sciences, Ballari | Ballari, Raichuru, Vijayanagara |
| 6 | Belgaum Institute of Medical Sciences, Belagavi | Belagavi |
| 7 | Gulbarga Institute of Medical Sciences, Kalaburgi | Kalaburgi, Yadagiri, Bidar |
| 8 | Hassan Institute of Medical Sciences, Hassan | Hassan, Chikkamagaluru |
| 9 | Mangala Institute of Para Medical Sciences, Mangalore | Dakshina Kannada, Udupi |
| 10 | Karnataka Institute of Medical Sciences, Hubbali | Hubbali, Dharawada, Haveri, Uttara Kannada (UK) |
| 11 | Koppal Institute of Medical Sciences, Koppal | Gadag, Koppal |
| 12 | Basaveshwara Medical College, Chitradurga | Chitradurga |
| 13 | Karnataka State Diploma in Nursing Board, Bengaluru | |

ವಿಶೇಷಾಧಿಕಾರಿಗಳು
ಕರ್ನಾಟಕ ಶುಶ್ರೂಷಾ ಮತ್ತು ಅರೆ ವೈದ್ಯಕೀಯ
ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ,
ಬೆಂಗಳೂರು

ಕಾರ್ಯದರ್ಶಿಗಳು
ಕ.ರಾ.ಶು,ಪ,ಮಂ, ಬೆಂಗಳೂರು
28/09/2021